**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

ಸಿ.ಸಿ. ನಂ. : 308/2016 ದಿನಾಂಕಃ 02-01-2024
ಸಿ ಡಬ್ಲೂ : 4
ಪಿ ಡಬ್ಲೂ : 3

---

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

| | |
|---|---|
| ಸಾಕ್ಷಿದಾರನ ಹೆಸರು | ಜಗದೀಶ ಲಕ್ಷಣ ಐಗಳಿ |
| ಗಂಡ/ ತಂದೆಯ ಹೆಸರು | ಲಕ್ಷಣ |
| ವಯಸ್ಸು | 45 ವರ್ಷ |
| ಉದ್ಯೋಗ | ಅಬಕಾರಿ ಉಪನಿರೀಕ್ಷಕರು |
| ವಾಸಸ್ಥಳ | ಸಾಃ ರಾಮದುರ್ಗ |

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು :**

<u>ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ವಕೀಲರಿಂದಃ</u>

ನಾನು 2001 ರಿಂದ 2016 ರವರೆಗೆ ಅಬಕಾರಿ ರಕ್ಷಕರು ಅಥಣಿ ವಲಯ ಎಂದು ಕೆಲಸ ಮಾಡಿರುತ್ತೇನೆ. ದಿಃ 29.09.2015 ರಂದು ಪ್ರಕರಣಕ್ಕೆ ಸಂಬಂಧಿಸಿದ 180 ಎಮ್ ಎಲ್ ನ ಮಹಾರಾಷ್ಟ್ರ ದೇಸಿ ಸಾಂತ್ರಾ 1 ಬಾಟಲಿಯನ್ನು ಮತ್ತು ದಾಖಲಾತಿಗಳನ್ನು ಚಾಸಾ-6 ರವರಿಂದ ಪಡೆದುಕೊಂಡು 30.09.2015 ರಂದು ರಾಸಾಯನಿಕ ಪರೀಕ್ಷೆಗೆ ಬೆಂಗಳೂರಿನ ಪ್ರಯೋಗಾಲಯದಲ್ಲಿ ನೀಡಿರುತ್ತೇನೆ. ಅದೇದಿನ ರಾಸಾಯನಿಕ ಪರೀಕ್ಷೆ ಮಾಡಿದ ವರದಿ ಮತ್ತು ಸ್ಯಾಂಪಲನ್ನು ಪಡೆದುಕೊಂಡು ವಾಪಸ್ಸು ಚಾಸಾ-6 ರವರಿಗೆ ದಿಃ 01.10.2015 ರಂದು ಮರಳಿ ನೀಡಿರುತ್ತೇನೆ. ನಾನು ಪಡೆದುಕೊಂಡ ರಾಸಾಯನಿಕ ಪರೀಕ್ಷೆಯ ವರದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-2 ಎಂದು ಮತ್ತು ನಾನು ಬರೆದುಕೊಟ್ಟ ಹೇಳಿಕೆ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಹಾಜರು ಇರುವ ಸ್ಯಾಂಪಲ ಬಾಟಲಿಯನ್ನು ನೋಡಿ ಗುರುತಿಸುತ್ತೇನೆ ಅದನ್ನು ಮು.ಮಾ .1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃಆರೋಪಿ ಪರ ವಕೀಲರು ಶ್ರೀ ಎ ಜೆ ಜೆ ವಕೀಲರಿಂದಃ</u>

2015 ಸೆಪ್ಟಂಬರ ರಲ್ಲಿ ನಾನು ಯಾವ ಊರಿಗೆ ಸಂಬಂದಿಸಿದಂತೆ ಬೀಟ ಕೆಲಸ ಮಾಡಿರುತ್ತೇನೆ ಎಂದು ನೆನಪಿಲ್ಲ. ನಾನು ಯಾವ ರೂಟಗೆ ಸಂಬಂದಿಸಿದಂತೆ ಕೆಲಸ

ಮಾಡಿರುತ್ತೇನೆಂದು ಹೇಳಲು ನನಗೆ ನೆನಪು ಇರುವುದಿಲ್ಲ. ನಾನು ಕರ್ತವ್ಯದ ಮೇಲೆ ಹೊರಗೆ ಹೊಗುವಾಗ ನಮ್ಮ ಠಾಣಾ ಡೈರಿಯಲ್ಲಿ ನಮೂದು ಮಾಡುತ್ತೇನೆ. 29.09.2015 ರಿಂದ 01.10.2015 ರವರೆಗೆ ನಾನು ಯಾವ ಕರ್ತವ್ಯದ ಮೇಲೆ ಕಛೇರಿಯಿಂದ ಹೊರಗೆ ಹೊಗಿರುತ್ತೇನೆಂದು ನಮ್ಮ ಠಾಣಾ ಡೈರಿಯಲ್ಲಿ ನಮೂದು ಮಾಡಿದ್ದೇನೆ. ಸದರಿ ಡೈರಿ ನ್ಯಾಯಾಲಯಕ್ಕೆ ಹಾಜರು ಮಾಡಲು ಯಾವುದೇ ತೊಂದರೆ ಇರುವುದಿಲ್ಲ . ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಬಳಿ 3-4 ಲೀಟರ ಮತ್ತು ಒಂದು ಮನೆ ಒಳಗೆ 5-6 ಲೀಟರನ ಸಾರಾಯಿಯನ್ನು ಮನೆ ಒಳಗೆ ಸಾಂಪ್ರಾದಾಯಿಕ ಸಮಾಂರಂಭಕ್ಕೆ ಬಳಸಲು ಇಟ್ಟುಕೊಳ್ಳುವ ಅವಕಾಶ ಅಬಕಾರಿ ಕಾಯಿದೆ ಅಡಿ ಇದೆ ಎಂದರೆ ಸಾಕ್ಷಿ 2.3 ಲೀಟರನಷ್ಟು ಮಾತ್ರ ಇಟ್ಟುಕೊಳ್ಳಬಹುದು ಎಂದು ನುಡಿಯುತ್ತಾರೆ. ದಿಃ 29.09.2015 ರಂದು ಬೆಳಿಗ್ಗೆ ನನಗೆ ಮೇಲಾಧಿಕಾರಿಗಳು ಮುದ್ದೆ ಮಾಲನ್ನು ತೆಗೆದುಕೊಂಡು ಹೋಗಲು ಆದೇಶ ವಾಡಿರುತ್ತಾರೆ. ಅಂದು ಸಂಜೆ 4.00 ಗಂಟೆಗೆ ಮುದ್ದೆ ಮಾಲನ್ನು ತಗೆದುಕೊಂಡು ಹೋಗಿರುತ್ತೇನೆ. ನಾನು ತೆಗೆದುಕೊಂಡ ಹೋದ ಮುದ್ದೇ ಮಾಲಿನಲ್ಲಿ ಸಾರಾಯಿ ತುಂಬಿದ್ದು ಇತ್ತು ಎಂದರೆ ಸಾಕ್ಷಿಯು ಅದಕ್ಕೆ ಸೀಲು ಹಾಕಲಾಗಿತ್ತು ಎಂದು ನುಡಿಯುತ್ತಾರೆ. ಮರುದಿನ ಬೆಳಿಗ್ಗೆ 8.00 ಗಂಟೆಗೆ ಬೆಂಗಳೂರಿನ ಪರೀಕ್ಷಾ ಕೇಂದ್ರಕ್ಕೆ ತಲುಪಿರುತ್ತೇನೆ. ಪ್ರಕರಣಕ್ಕೆ ಸಂಬಂದಿಸಿದಂತೆ ಎಫಎಸಎಲ ಕಛೇರಿಯವರು ಅಂದೇ ವರದಿಯನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಸಂಬಂದಸಿದಂತೆ ಎಫಎಸಎಲ ಕಛೇರಿಯವರು 2-3 ದಿನಗಳ ಸಮಯ ತೆಗೆದುಕೊಂಡು ವರದಿ ನೀಡುತ್ತಾರೆ ಎಂದರೆ ಸಾಕ್ಷಿಯು ಅವರು ಕೆಲಸ ಕಡಿಮೆ ಇದ್ದರೆ ಅಂದೆ ವರದಿ ನೀಡುತ್ತಾರೆ ಎಂದು ನುಡಿಯುತ್ತಾರೆ. ಅಂದು ಮದ್ಯಾಹ್ನ 3.00 ಗಂಟೆಗೆ ವರದಿಯನ್ನು ಸ್ವೀಕರಿಸಿರುತ್ತೇನೆ. ಸಂಜೆ 6.00 ಗಂಟೆಗೆ ಬೆಂಗಳೂರಿನಿಂದ ಹೊರಟಿರುತ್ತೇನೆ. ವಾಪಸ್ಸು ನನಗೆ ಮುದ್ದೆಮಾಲನ್ನು ನೀಡಿದಾಗ ಅದರಲ್ಲಿ ಸ್ವಲ್ಪ ದ್ರವ ಇತ್ತು. ಮು.ಮಾ1 ನ್ನು ನೋಡಲಾಗಿ ಅದರಲ್ಲಿ ಯಾವುದೇ ದ್ರವ ಇರುವುದಿಲ್ಲ ಎಂದರೆ ಸಾಕ್ಷಿಯು ಬಹಳ ದಿನ ಆದ ಕಾರಣ ಅದರಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮುದ್ದೆಮಾಲಿನ ಮೇಲೆ 2012 ಎಂದು ಕೈಯಲ್ಲಿ ದಿನಾಂಕ ನಮೂದು ಆಗಿರುತ್ತದೆ. ಅದು ಯಾವ ವಿಷಯಕ್ಕೆ ಸಂಬಂದಿಸಿದ್ದು ಎಂದರೆ ಸಾಕ್ಷಿಯು ಅದು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 01.10.2015 ರಂದು ನಾನು ಅಥಣಿಗೆ ಬಂದ ನಂತರ ಮನೆಗೆ ಹೋಗಿ ಆ ನಂತರ ಠಾಣೆಗೆ ಬಂದಿರುತ್ತೇನೆ, ಆಗ ಬೆಳಿಗ್ಗೆ 11.00 ಗಂಟೆ ಸಮಯ ಆಗಿತ್ತು. 2015 ರಲ್ಲಿ ಚಾಸಾ-5 ಮತ್ತು 6 ಇವರಿಬ್ಬರ ನನ್ನ ಮೋಧಿಕಾರಿಗಳು ಆಗಿದ್ದರು ಎಂದರ ಸರಿ . ಆದ ಕಾರಣ ಅವರು ಹೇಳಿದಂತೆ ನಾನು ಕೇಳುತ್ತಿದ್ದೆ ಎಂದರೆ ಸಾಕ್ಷಿಯು ಕೆಲಸಕ್ಕೆ ಸಂಬಂದಿಸಿದ ಆದೇಶಗಳನ್ನು ಕೇಳುತ್ತಿದ್ದೆ ಎಂದು ನುಡಿಯುತ್ತಾರೆ. ಸದರಿ ಮುದ್ದೆಮಾಲಿನ ಬಾಟಲಿಗಳಂತೆ ನಮ್ಮ ಠಾಣೆಯಲ್ಲಿ ಸಾಕಷ್ಟು ಬಾಟಲಿಗಳು ಇರುತ್ತವೆ ಎಂದರೆ ಸಾಕ್ಷಿಯು ಬೇರೆ ಪ್ರಕರಣಗಳಲ್ಲಿ ಜಪ್ತಿ ಮಾಡಿದ ಬಾಟಲಿಗಳು

ಇರುತ್ತವೆ ಎಂದು ನುಡಿಯುತ್ತಾರೆ. ಮುದ್ದೆ ಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ನಮ್ಮ ಇಲಾಖೆಯ ಅಂಕಿ-ಅಂಶಗಳನ್ನು ತೋರಿಸಲು ನಮ್ಮ ಮೇಲಾಧಿಕಾರಿಗಳ ಮಾತು ಆರೋಪಿನ ವಿರುದ್ದ ಖೊಟ್ಟಿಪ್ರಕರಣ ದಾಖಲು ಮಾಡಿ ಖೊಟ್ಟಿಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿಗೆ ಹೋಗಿರುವುದಿಲ್ಲ, ಕಛೇರಿಯಲ್ಲಿಯೆ ಕುಳಿತು ದಾಖಲಾತಿಗಳನ್ನು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.